Ref.No. 37–2019

MW–1,

ದಿನಾಂಕಃ 17–04–2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ– 1 ನೇ ಪಾರ್ಟಿ ಪರವಾಗಿಃ ಶ್ರೀ. ಪಿ ಪಿ ಬಿ ಆರ್ ವಕೀಲರಿಂದಃ

ಈ ಪ್ರಕರಣದಲ್ಲಿ ಮುತ್ತುರಾಜ್ ಮತ್ತು ದಿಲೀಪ್ ಇಬ್ಬರೂ fixed term employee ಗಳಾಗಿರುತ್ತಾರೆ. ಈಗ ನನಗೆ ತೋರಿಸಲಾಗುತ್ತಿರುವ ದಾಖಲಾತಿಗಳು ಮುತ್ತುರಾಜ್ ರವರ ಪೇ ಸ್ಲಿಪ್ ಗಳಾಗಿರುತ್ತವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಸಾಕ್ಷಿದಾರರು ಗುರುತಿಸಿದ ಮೇರೆಗೆ ಡಬ್ಲ್ಯೂ–41 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಲಾಗುತ್ತಿರುವ ದಾಖಲಾತಿಗಳು ದಿಲೀಪ್ ರವರ ಪೇ ಸ್ಲಿಪ್ ಗಳಾಗಿರುತ್ತವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಸಾಕ್ಷಿದಾರರು ಗುರುತಿಸಿದ ಮೇರೆಗೆ ಡಬ್ಲ್ಯೂ –42 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಲಾಗುತ್ತಿರುವ ದಾಖಲಾತಿಗಳು ರವೀಂದ್ರ ಎಸ್ ರವರ ಪೇ ಸ್ಲಿಪ್ ಗಳಾಗಿರುತ್ತವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಸಾಕ್ಷಿದಾರರು ಗುರುತಿಸಿದ ಮೇರೆಗೆ ಡಬ್ಲ್ಯೂ –43 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಲಾಗುತ್ತಿರುವ ದಾಖಲಾತಿಗಳು ಸುಬ್ರಹ್ಮಣ್ಯ ಡಿ ಕೆ ರವರ ಪೇ ಸ್ಲಿಪ್ ಗಳಾಗಿರುತ್ತವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಸಾಕ್ಷಿದಾರರು ಗುರುತಿಸಿದ ಮೇರೆಗೆ ಡಬ್ಲ್ಯೂ –44 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಲಾಗುತ್ತಿರುವ ದಾಖಲಾತಿಗಳು ಶಶಿಕುಮಾರ್ ವಿ ರವರ ಪೇ ಸ್ಲಿಪ್ ಗಳಾಗಿರುತ್ತವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಸಾಕ್ಷಿದಾರರು ಗುರುತಿಸಿದ ಮೇರೆಗೆ ಡಬ್ಲ್ಯೂ –45 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಲಾಗುತ್ತಿರುವ ದಾಖಲಾತಿಗಳು ಪ್ರಶಾಂತ್ ಕುಮಾರ್ ಜಿ ರವರ ಪೇ ಸ್ಲಿಪ್ ಗಳಾಗಿರುತ್ತವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಸಾಕ್ಷಿದಾರರು ಗುರುತಿಸಿದ ಮೇರೆಗೆ ಡಬ್ಲ್ಯೂ –46 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಲಾಗುತ್ತಿರುವ ದಾಖಲಾತಿಗಳು ಮಹೇಶ್ ಬಿ ಎಸ್ ರವರ ಪೇ ಸ್ಲಿಪ್ ಗಳಾಗಿರುತ್ತವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಸಾಕ್ಷಿದಾರರು ಗುರುತಿಸಿದ ಮೇರೆಗೆ ಡಬ್ಲ್ಯೂ–47 ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಲಾಗುತ್ತಿರುವ ದಾಖಲಾತಿಗಳು ತೌಸಿಫ್ ಅಹಮದ್ ರವರ ಪೇ ಸ್ಲಿಪ್ ಗಳಾಗಿರುತ್ತವೆ ಎಂದರೆ ಸರಿ . ಸದರಿ ದಾಖಲಾತಿಗಳನ್ನು ಸಾಕ್ಷಿದಾರರು ಗುರುತಿಸಿದ ಮೇರೆಗೆ ಡಬ್ಲ್ಯೂ –48 ಎಂದು ಗುರುತಿಸಲಾಯಿತು. ಮೇಲೆ ಹೇಳಿದ ರವೀಂದ್ರ ಮತ್ತು ಇತರರು technical trainees ಗಳಾಗಿರುತ್ತಾರೆ ಎಂದರೆ ಸರಿ . ಈ ಪ್ರಕರಣದಲ್ಲಿ ಉಳಿದಿರುವ ಎಲ್ಲಾ trainees ಗಳನ್ನು apprentice act ಅಡಿಯಲ್ಲಿ ಒಂದು ವರ್ಷದ ವರೆಗೆ ನೇಮಿಸಲಾಗಿರುತ್ತದೆ ಎಂದರೆ ಸರಿ . ಸದರಿ ಕಾಯಿದೆ ಅಡಿಯಲ್ಲಿ ಅವರಿಗೆ ವೇತವನ್ನು ನೀಡಲಾಗಿರುತ್ತದೆ ಎಂದರೆ ಸರಿ . ನಂತರ ಅವರನ್ನು ಕಂಪನಿಯ ಪಾಲಿಸಿ ಪ್ರಕಾರ 2 ವರ್ಷ ಮುಂದುವರೆಸಲಾಗಿರುತ್ತದೆ ಎಂದರೆ ಸರಿ .

ಕಂಪನಿಯ ಪಾಲಿಸಿ ಯಲ್ಲಿ trainees ಗಳಿಗೆ ಎಷ್ಟು ವೇತನ ನೀಡಬೇಕು ಎಂದು ನಮೂದಾಗಿರುತ್ತದೆ ಎಂದರೆ ಸರಿ . technical trainees ಮುಗಿಸಿದವರನ್ನು 2014 ರಲ್ಲಿ fixed term employee ಎಂದು 2 ವರ್ಷದ ಅವಧಿಗೆ ನೇಮಕ ಮಾಡಲಾಗಿರುತ್ತದೆ ಎಂದರೆ ಸರಿ . ಆ ರೀತಿ ನೇಮಕ ಮಾಡಿದವರಲ್ಲಿ ಈ ಪ್ರಕರಣದಲ್ಲಿರುವ ಮುತ್ತುರಾಜ್ ಮತ್ತು ದಿಲೀಪ್ ಕುಮಾರ್ ರವರಾಗಿರುತ್ತಾರೆ. ನಿ ಎಂ–44 ಮುತ್ತು ರಾಜ್ ಗೆ ಸೇರಿದ ದಾಖಲಾತಿಯಾಗಿರುತ್ತದೆ ಎಂದರೆ ಸರಿ . ಸದರಿ ದಾಖಲಾತಿಯಲ್ಲಿ trainee ಎಂಬ ಪದ ಬಳಸಲಾಗಿರುವುದಿಲ್ಲ ಎಂದರೆ ಸರಿ . fixed term employee ಯ ಬಗ್ಗೆ standing order ನಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿ . 2014 fixed term employee ಎಂದು ನೇಮಿಸಲು ಕಾನೂನಿನಲ್ಲಿ ಯಾವುದೇ ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ . 2018 ರಲ್ಲಿ industrial employment standing order general rules 1946 ಗೆ ತಿದ್ದುಪಡಿಯನ್ನು ತರಲಾಗಿರುತ್ತದೆ ಎಂದರೆ ಸರಿ. ಈಗ ನಾನು ನೋಡುತ್ತಿರುವ ದಾಖಲಾತಿ ಸದರಿ ತಿದ್ದುಪಡಿ ಯ ನೋಟಿಫಿಕೇಷನ್ ಆಗಿರುತ್ತದೆ ಸದರಿ ನೋಟಿಫಿಕೇಷನ್ ಅನ್ನು ನಿ ಡಬ್ಲ್ಯೂ–49 ಎಂದು ಗುರುತಿಸಲಾಯಿತು. ಸದರಿ ತಿದ್ದುಪಡಿಯ ಪ್ರಕಾರ ಕಾಯಂ ನೌಕರರಿಗೆ ನೀಡಿದ ಸೌಲಭ್ಯಗಳನ್ನು fixed term employee ಗಳಿಗೆ ನೀಡಬೇಕು ಎಂದು ಇರುತ್ತದೆ ಎಂದರೆ ಸರಿ . fixed term employee ಗಳಿಗೆ ಕನಿಷ್ಟ ವೇತನವನ್ನೂ ಕೂಡ ನಾವು ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ . ಪೇ ಸ್ಲಿಪ್ ನಲ್ಲಿ fixed term employee ಗಳನ್ನು temporary employees ಗಳೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ನಿ ಎಂ–18 ರಲ್ಲಿ technical trainee ಗಳ ಟ್ರೈನಿಂಗ್ ಅನ್ನು ವಿಸ್ತರಿಸುವ ಬಗ್ಗೆ ನಮೂದು ಮಾಡಲಾಗಿರುತ್ತದೆ. ಆ ರೀತಿ ನಮೂದಾಗದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . technical trainee ಗಳಿಗೆ ನೀಡಿದಂತಹ ಆದೇಶದಲ್ಲಿಯೂ ಕೂಡ ಅವರಿಗೆ temporary employees ಎಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ಪೇ ಸ್ಲಿಪ್ ನಲ್ಲಿ technical trainee ಗಳನ್ನು temporary employees ಗಳೆಂದು ನಮೂದಿಸಲಾಗಿರುತ್ತದೆ ಎಂದರೆ ಸರಿ . ನಿ ಡಬ್ಲು್ಯ–1 ರಲ್ಲಿ technical trainee ಗಳಿಗೆ 6 ತಿಂಗಳಿಗೆ ಒಮ್ಮೆ evaluation ನ್ನು ಮಾಡಲಾಗುತ್ತದೆ ಎಂದರೆ ಸರಿ . ಸದರಿ evaluation ನಲ್ಲಿ ತೇರ್ಗಡೆ ಹೊಂದಿದ್ದಲಿ ಅವರು ಮುಂದಿನ 6 ತಿಂಗಳ ಟ್ರೈನಿಂಗ್ ಅರ್ಹರಾಗುತ್ತಾರೆ ಎಂದರೆ ಸರಿ .ಅದೇ ರೀತಿ 2 ವರ್ಷಗಳ ಕಾಲ evaluation process ಮುಗಿದ ನಂತರ ಅವರು permanent employees ಆಗಲು ಅರ್ಹರಾಗಿರುತ್ತಾರೆ ಎಂದರೆ ಸಾಕ್ಷಿದಾರರು qualify ಆಗಿದ್ದರೆ ಅರ್ಹರಾಗಿರುತ್ತಾರೆ ಎಂದು ನುಡಿಯುತ್ತಾರೆ . qualify ಆಗದೇ ಇದ್ದಲ್ಲಿ ಅವರಿಗೆ ಮತ್ತೊಂದು ಅವಕಾಶವನ್ನು ನೀಡಲಾಗುತ್ತದೆ. ಆ ರೀತಿ ಅವಕಾಶ ಕಲ್ಪಿಸಲು ಪಾಲಿಸಿಯಲ್ಲಿ ಅವಕಾಶ ಇಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ನಿ ಡಬ್ಲು್ಯ–39 ರ ಪ್ರಕಾರ ಕಾರ್ಮಿಕ ಅಧಿಕಾರಿ ಮೈಸೂರು ಜಿಲ್ಲೆ ಇವರ 2 ನೇ ಪಾರ್ಟಿ ಸಂಸ್ಥೆ ಗೆ ಭೇಟಿ ನೀಡಿ ಪರಿವೀಕ್ಷಣಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿ . ಸದರಿ ದಾಖಲಾತಿಯಲ್ಲಿ ನನ್ನ ಸಹಿ ಇರುತ್ತದೆ ಎಂದರೆ ಸರಿ .

ಸದರಿ ವರದಿಯಲ್ಲಿ technical trainee ಗಳು operator ಗಳಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಲಾಗಿರುತ್ತದೆ ಎಂದರೆ ಸರಿ . ಮಾರ್ಚ್ 2026 ರಲ್ಲಿ technical trainee ಗಳಿಗೆ ರೂ.13,475/- ಮತ್ತು fixed term employee ಗಳಿಗೆ ರೂ.13,700/- ಗಳ ವೇತವನ್ನು ನೀಡಲಾಗಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಅದಕ್ಕಿಂತ ಹೆಚ್ಚಾಗಿ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ . ಅದಕ್ಕಿಂತ ಹೆಚ್ಚು ನೀಡದಿದ್ದರೂ ಸಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ . 2022 ರ ಕನಿಷ್ಟ ವೇತನ ಅಧಿಸೂಚನೆಯ ಪ್ರಕಾರ skilled labourers ಗೆ ರೂ.15,406/- ವೇತನ ನೀಡಬೇಕಾಗುತ್ತದೆ ಎಂದರೆ ಸರಿ . ಈಗ ನನಗೆ ತೋರಿಸಲಾಗುತ್ತಿರು ದಾಖಲಾತಿ 2022 ರ ಕನಿಷ್ಟ ವೇತನ ಅಧಿಸೂಚನೆಯಾಗಿರುತ್ತದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ನಿ ಡಬ್ಲ್ಯೂ-50 ಎಂದು ಗುರುತಿಸಲಾಯಿತು.

ಈ ಪ್ರಕರಣದಲ್ಲಿರುವ trainee ಗಳಿಗೆ technician ಹುದ್ದೆ ಆಫರ್ ಅನ್ನು ನೀಡಲಾಗಿರುತ್ತದೆ ಎಂದರೆ ಸರಿ . Technician ಹುದ್ದೆ ಬಗ್ಗೆ standing order ನಲ್ಲಿ ಉಲ್ಲೇಖ ವಿರುವುದಿಲ್ಲ. ಈ ಪ್ರಕರಣದಲ್ಲಿ ಉಳಿದಿರುವ 14 ಕಾರ್ಮಿಕರು ಸದರಿ ಆಫರ್ ಗೆ ನಮಿಂದ ಸ್ಪಷ್ಟೀಕರಣ ಕೇಳಿರುತ್ತಾರೆ ಎಂದರೆ ಸರಿ . ಅದಕ್ಕೆ ಸ್ಪಷ್ಟೀಕರಣ ನಾವು ನೀಡಿರುವುದಿಲ್ಲ ಎಂದರೆ ಸರಿಯಲ್ಲ . ಈ ಪ್ರಕರಣದಲ್ಲಿ ಹಾಜರು ಪಡಿಸಿದ ದಾಖಲಾತಿಗಳಲ್ಲಿ ನೇಮಕಾತಿ ಮತ್ತು ಆಫರ್ ಲೆಟರ್ ಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ದಾಖಲಾತಿಗಳು ಸೃಷ್ಟಿಸಿದ ದಾಖಲಾತಿಗಳಾಗಿರುತ್ತವೆ ಎಂದರೆ ಸರಿಯಲ್ಲ . 2 ನೇ ಪಾರ್ಟಿ ಸಂಸ್ಥೆ ಯಲ್ಲಿ ಬಳಸಲಾಗುತ್ತಿರುವ technical trainee, fixed term employee, and technician ಹುದ್ದೆಗಳು ಕಾನುನು ಬಾಹಿರವಾಗಿರುತ್ತವೆ ಹಾಗೂ ಸಂಸ್ಥೆ ಯ ದೃಡೀಕೃತ ಸ್ಥಾಯಿ ಆದೇಶದ ವಿರುದ್ಧವಾಗಿರುತ್ತದೆ ಎಂದರೆ ಸಾಕ್ಷಿದಾರರು technical trainee, ಬಗ್ಗೆ ದೃಡೀಕೃತ ಸ್ಥಾಯಿ ಆದೇಶದಲ್ಲಿ ಉಲ್ಲೇಖವಿರುತ್ತದೆ, fixed term employee and technician ಗಳ ಉಲ್ಲೇಖವಿರುವುದಿಲ್ಲ ಎಂದು ನುಡಿಯುತ್ತಾರೆ . ಈ ಪ್ರಕರಣದಲ್ಲಿರುವ technical trainee ಮತ್ತು fixed term employee ಗಳು ಕಾಯಂ ನೌಕರರಂತೆ ಕೆಲಸ ಮಾಡುತ್ತಿದ್ದರೂ ಅವರನ್ನು ವಂಚಿಸುವ ಉದ್ದೇಶದಿಂದ technical trainee ಮತ್ತು fixed term employee ಹುದ್ದೆಗಳನ್ನು ಸೃಷ್ಟಿಸಲಾಗಿರುತ್ತದೆ ಎಂದರೆ ಸರಿಯಲ್ಲ . technical trainee ತರಬೇತಿ ಮುಗಿದ ತಕ್ಷಣ ಎಷ್ಟು trainee ಗಳಿಗೆ ಕಾಯಂ ಮಾಡಲಾಗಿರುತ್ತದೆ ಎಂಬುದರ ಬಗ್ಗೆ ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಬಹುದು. 2 ವರ್ಷ ಮುಗಿದ ನಂತರ ಟ್ರೈನಿಗ್ ಮುಗಿದ ನಂತರ 2 ನೇ ಪಾರ್ಟಿ ಸಂಸ್ಥೆ ಯು technical trainee ಅವರನ್ನು ಕಾಯಂ ನೌಕರರನ್ನಾಗಿ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿದಾರರು qualify ಆದರೆ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ . ಅದೇ ರೀತಿ fixed term employee ಗಳ ಅವಧಿ ಮುಗಿದ ನಂತರ ಅವರನ್ನು ಕಾಯಂ ನೌಕರರನ್ನಾಗಿ ಮಾಡಬೇಕಾಗುತ್ತದೆ ಎಂದರೆ ಸಾಕ್ಷಿದಾರರು qualify ಆದರೆ ಮಾಡಬೇಕಾಗುತ್ತದೆ ಎಂದು ನುಡಿಯುತ್ತಾರೆ .

ಈ ಪ್ರಕರಣದಲ್ಲಿರುವ trainee ಮತ್ತು fixed term employee ಗಳು ತಮ್ಮ ನೇಮಕಾತಿಯ ದಿನದಿಂದ ಕಾಯಂ ನೌಕರಾರಗಲು ಅರ್ಹರಾಗಿರುತ್ತಾರೆ ಎಂದರೆ qualify ಆದ ದಿನದಿಂದ ಅರ್ಹರಾಗಿರುತ್ತಾರೆ ಎಂದು ನುಡಿಯುತ್ತಾರೆ .

ಮರು ವಿಚಾರಣೆಃ 2 ನೇ ಪಾರ್ಟಿ ಪರವಾಗಿಃ ಶ್ರೀ. ಜೆ ಪಿ ವಕೀಲರಿಂದಃ
ನಿ ಡಬ್ಲ್ಯೂ–39 ನೋಟೀಸ್ ಸಂಸ್ಥೆಗೆ ನೀಡಿದ ನಂತರ ಅದಕ್ಕೆ ಉತ್ತರ ಮತ್ತು ದಾಖಲಾತಿಗಳನ್ನು ಸಂಸ್ಥೆಗೆ ನೀಡಿದ ಮೇರೆಗೆ ಅದನ್ನು ಪರಿಶೀಲಿಸಿ ನೋಟೀಸ್ ನ್ನು ಮುಕ್ತಾಯಗೊಳಿಸಲಾಗಿರುತ್ತದೆ. ನಿ ಡಬ್ಲ್ಯೂ–39 ವರದಿಯನ್ನು ನೀಡಿದ ಲೇಬರ್ ಇನ್ಸಪೆಕ್ಟರ್ ಕನಿಷ್ಟ ವೇತನ ಕಾಯಿದೆ ಅಧಿಕಾರಿಯ ಮುಂದೆ 2 ನೇ ಪಾರ್ಟಿ ಸಂಸ್ಥೆ ಯ ವಿರುದ್ದ ಕೇಸನ್ನು ದಾಖಲಿಸಿದ್ದು ಸದರಿ ಪ್ರಕರಣದಲ್ಲಿ 2 ನೇ ಪಾರ್ಟಿ ಸಂಸ್ಥೆ ಯು ದಾಖಲಾತಿಗಳನ್ನು ನೀಡಿದ್ದು ಸಂಸ್ಥೆ ಯು ಟ್ರೈನಿಗಳಿಗೆ ಕನಿಷ್ಟ ವೇತನ ಕಾಯಿದೆ ಗಿಂತ ಹೆಚ್ಚಾಗಿ ವೇತನ ನೀಡುತ್ತಿದ್ದುದ್ದು ಕಂಡು ಬಂದಿದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ.

ಮರು ಪಾಟೀ ಸವಾಲು ಃ 1 ನೇ ಪಾರ್ಟಿ ಪರವಾಗಿಃ ಶ್ರೀ. ಪಿ ಪಿ ಬಿ ಆರ್ ವಕೀಲರಿಂದಃ
ನಿ ಡಬ್ಲ್ಯೂ–39 ನೋಟೀಸ್ ಸಂಬಂಧಿಸಿದಂತೆ ಕನಿಷ್ಟ ವೇತನ ಕಾಯಿದೆ ಅಧಿಕಾರಿಯ ಮುಂದೆ ಇನ್ನೂ ಪ್ರಕರಣವು ಬಾಕಿ ಇರುತ್ತದೆ ಎಂದರೆ ಸರಿಯಲ್ಲ .

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)
(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಔದ್ಯಮಿಕ ನ್ಯಾಯಾಧೀಕರಣ,
ಮೈಸೂರು.